ಸದರೀ ದರಖಾಸ್ತುದಾರರಾದ ವೆಂಕಣ್ಣನವರ ಅರ್ಜೀಯನ್ನು. 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಯರ ಆಸ್ತಿಗೆ ಹಕ್ಕು ದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂತ ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 62.

ಮೂಲೂರು ತಾಲ್ಲೂಕು ನರಸಾಪುರದಲಿದ್ದು ಮೃತಪಟ್ಟ ಸುಬರಾಯ ಮತ್ತು ಈತನ ಮಗ ವೆಂಕಟರಾವ್ ಇವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ್ರು ಮೂಲೂರು ತಾಲ್ಲೂಕು ನರಸಾಪುರದಲ್ಲಿರತಕ್ಕ ರಾಮುದಾಸಯ್ಯ, ಮೃತಪಟ್ಟ ಸದರೀ ಸುಬ್ಬರಾಯ ತನಿಗೆ ತಮ್ಮನೆಂತಲೂ ವೆಂಕಟರಾವು ತನಿಗೆ ತಮ್ಮನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೂಲೂರು ತಾಲ್ಲೂಕು ನರಸಾಪುರ ವಾಸಸ್ಥಳದ ಗೋಪಾಲ್ಲಯ್ಯನ ರಾಮುದಾಸಯ್ಯ ನರಸಾಪುರದ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯ ಈತನ ಮಗ ವೆಂಕಟರಾವು ಇವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮುದಾಸಯ್ಯನವರ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯ ಈತನ ಮಗ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್, ಜಡ್ಜ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 28ನೇ ಫಿಬ್ರವರೀ 1887.

ತಪ್ಪು ದುರಸ್ತು.

1886ನೇ ಇಸವಿ ಡಿಸಂಬರ್ 18ನೇ ಮರ್ತು ಮಿನ ಅರಗಿನ ಇಜಾರೇ ಇಸ್ತಿಹಾರ್‌ನಾಮೆಯ ಯರಡನೇ ಪಜ್ತಿಯಲ್ಲಿ "ದೇವರಾಯದುರ್ಗ" ಯಂಬ ಮಾತನ್ನು ಬಿಟ್ಟುಬಿಡತಕ್ಕದ್ದು.

ತಾರೀಖು 24ನೇ ಜನವರೀ 1887.

ಇದರಿಂದ ಸಮ್ಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ.—ತಿಪಟೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ತಿಪಟೂರು ಸಬ್ ರಿಜಿಸ್ಟ್ರಾರ್‌ರಲ್ಲಿ ಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 82ನೇ ಕಲಂ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜು ಜಪ್ತಿ ತಾರೀಖು.	ದಸ್ತಾವೇಜು ಜಪ್ತಿ ಮಾಡಿದಾದ ಸ್ಥಳಕ್ಕೆ ತಾರೀಖು.	ದಸ್ತಾವೇಜು ಜಪ್ತಿ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನು ಬರಿಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
336	25—12—84	29—12—84	30—12—84	ತಿಪಟೂರು ತಾಲ್ಲೂಕು ನೊಣವಿನಕೆರೇ ಗ್ರಾಮದಲ್ಲಿ ಇರುವ ಬ್ರಾಹ್ಮಣಾವಾ ರದ ತಾಲ್ಲೂಕು ಲೇಟ್ ಜುಡಿಷಿಯಲ್‌ಗುಮಾಸ್ತೆ ಕಡಬದಕೂಗಿ ವೇಂಕು ನರಸುಹ್ಮಾಚಾರ್ರಮಕ್ಕಳು ಗೋಪಾಲಯ್ಯಂಗಾರ್ರ ಹೆಂಡತಿ ಸೀತಮ್ಮ	ತಿಪಟೂರು ತಾಲ್ಲೂಕು ನೊಣವಿನಕೆರೆ ವಾಸಸ್ಥ ಅಳಿಯಂಗರ್ ಚಾರ್ಯರವರ ಮಕ್ಕಳು ಗರುಡಾಚಾರು)	ನದರೀ ನೊಣವಿನಕೆರೇ ಗ್ರಾಮದಲ್ಲಿ ಇರುವ ಮನೆ 1ಕ್ಕೆ ಚಕ್ಕ ಬಂದಿ ಪೂರ್ವ ಪಶ್ಚಿಮಕ್ಕೆ ನಗರದ ಕೃಷ್ಣಯ್ಯಂಗಾರ್ರ ಮನೆ, ಪಶ್ಚಿಮಕ್ಕೆ ಲಕ್ಷ್ಮೀನಾರಣಪ್ಪನವರ ಮನೆ ಮಗ್ಗಲು ಪೋಣಿ, ದಕ್ಷಿಣಕ್ಕೆ ರಾಜಬೀ ದಿ, ಉತ್ತರಕ್ಕೆ ಅಂಬೇ ತಿರುಮಲ್ಲಯ್ಯನವರ ಪಾಳು ನಿವೇಶನದ ಮಗ್ಗಲು ಪೂಣಿ, ಪೂರ್ವ ಪಶ್ಚಿಮ ಗಜ $18\frac{1}{2}$ ಉತ್ತರ ದಕ್ಷಿಣ ಗಜ 18 ಹೆಂಚಿನ ಮನೆ ಇದಕ್ಕೆ ಶೇರಿದ ಹಿತ್ತಲು ಮತ್ತು ನಿವೇಶನ ಸಹ (300) ರೂಪಾಯಿಗಳಿಗೆ ಖರೀದಿಗೆಕೊಟ್ಟು ಯಿರುವದಾಗಿ ವಗೈರೆ.

ಪಿ. ಯರ್. ಕೃಷ್ಣಮೂರ್ತಿ,
ರಿಜಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 10.

ಮೃತಪಟ್ಟ ಹದಿನಾರುಲಕ್ಷ್ಮಣಿಂಗರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಲಕ್ಷಂಬಾಯಿ, ಮೃತಪಟ್ಟ ಸದರೀ ಹದಿನಾರುಲಕ್ಷ್ಮಣಿಂಗರ ವುಯಿಲ್ ಮೇಲಿಗೂ ಮತ್ತು ನಾದನಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅತ್ತಿಕುಪ್ಪ ತಾ|| ಕಿಕ್ಕೇರಿ ಈಸಬಾ ಸ್ಥಳದ ಸದರೀ ಲಕ್ಷಂಬಾಯಿ ಸದರೀ ವಾಸಸ್ಥನಾಗಿ ಮೃತಪಟ್ಟ ಹದಿನಾರುಲಕ್ಷ್ಮಣಿಂಗರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿನ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷಂಬಾಯಿಯ ಅರ್ಜಿಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹದಿನಾರುಲಕ್ಷ್ಮಣಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 36.

ಮೃತಪಟ್ಟ ಕರಗಪೋಯಿಯ ಆಸ್ತೀ ವಿಷಯದಲ್ಲಿ.—

ಅರ್ಜೀದಾರ ದ್ಯಾವೈಯನು ಮೃತಪಟ್ಟ ಸದರೀ ಕರಗಪೋಯಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಹೊಸ ಆಲಗೂಡು ಗ್ರಾಮದ ಸ್ಥಳದ ಡಿಟೋ ದ್ಯಾವೈಯನು ಡಿಟೋ ವಾಸಸ್ಥನಾಗಿ ಮೃತಪಟ್ಟ ಕರಗಪೋಯಿಯ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ದ್ಯಾವೈಯನ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಗಪೋಯಿಯ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ